ಪ್ರಬಂಧ

# ಪುಸ್ತಕ ಬಿಡುಗಡೆಯ ಗಡಿ-ಬಿಡಿ!




**ಚಂದ್ರಕಾಂತ ವಡ್ಡು**

ಕಲೆ: ಮುರಳೀಧರ್ ರಾಥೋಡ್


ಕನ್ನಡ ಪುಸ್ತಕ ಓದುಗರ ಸಂಖ್ಯೆ ಕುಸಿದಿದೆ ಎಂಬ ಪ್ರಾಸಿಕ್ಯೂಷನ್ ಆರೋಪವನ್ನು ಕಟಕಟೆಯಲ್ಲಿ ನಿಂತ ಓದುಗ ಸಕಾರಣವಾಗಿ ನಿರಾಕರಿಸಲು, ತನ್ನ ನಿರಪರಾಧವನ್ನು ಸಾಕ್ಷಿ ಸಮೇತ ಸಾಬೀತು ಮಾಡಲು ಸಾಕಷ್ಟು ಸಾಮಗ್ರಿ ಹೊಂದಿದ್ದಾನೆ. ಕನ್ನಡದಲ್ಲಿ ಪ್ರತೀವರ್ಷ ಎರಡು ಸಾವಿರಕ್ಕೂ ಹೆಚ್ಚು ಪುಸ್ತಕಗಳು ಲೇಖಕನಿಂದ 'ಬಿಡುಗಡೆ' ಹೊಂದುತ್ತವೆ ಎನ್ನುವುದು ಓದುಗನ ಪರವಾದ ಬಹುಮುಖ್ಯ ಸಾಂದರ್ಭಿಕ ಸಾಕ್ಷ್ಯ. ಗ್ರಂಥಾಲಯಗಳ ಖರೀದಿ ಸಮಸ್ಯೆಗಳ ಮಧ್ಯೆಯೂ ಇದು ಸಾಧ್ಯವಾಗುತ್ತಿದೆ ಎಂಬುದು ಪ್ರಮುಖಾಂಶ. ಇಲ್ಲಿ ಪುಸ್ತಕಗಳು ಲೇಖಕನಿಂದ 'ಬಿಡುಗಡೆ' ಆಗಲು ಅವೇನು ಆತನ ಬಂಧನದಲ್ಲಿರುತ್ತವೆಯೇ, ಹಾಗೆ ಅನಧಿಕೃತವಾಗಿ ವಶದಲ್ಲಿರಿಸಿಕೊಂಡಿದ್ದರೆ ಹೆಬಿಯಸ್ ಕಾರ್ಪಸ್ ಅರ್ಜಿ ಏಕೆ ಸಲ್ಲಿಸಲಿಲ್ಲ... ಇತ್ಯಾದಿ ಪ್ರಶ್ನೆಗಳು ಪಾಟಿಸವಾಲಿನಲ್ಲಿ ಬರುವುದು ಸಹಜ.

ಇಂಥ ಪ್ರಾಸಿಕ್ಯೂಷನ್ ಆಕ್ಷೇಪಣೆಗಳಿಗೆ ಸಮಜಾಯಿಷಿ ನೀಡಲು ಖುದ್ದು ಪ್ರಕಾಶಕ ಹಾಜರಾಗಿ, 'ಹೌದು ಸ್ವಾಮಿ, ಲೇಖಕ ಪುಸ್ತಕದ ವಿಷಯವನ್ನು ತನ್ನೊಳಗೆ ಅವುಚಿಟ್ಟುಕೊಂಡು, ತನಗೇನೂ ಗೊತ್ತಿಲ್ಲದವನಂತೆ ಫೇಸ್ಬುಕ್ಕಿನಲ್ಲಿ ಓಡಾಡಿಕೊಂಡಿದ್ದಕ್ಕೆ ನಾನೇ ಪ್ರತ್ಯಕ್ಷದರ್ಶಿ. ನಾನು ಪರಿಪರಿಯಾಗಿ ಪುಸಲಾಯಿಸಿ, ಸಂಭಾವನೆಯ ಆಮಿಷವೊಡ್ಡಿ ವಿಷಯವನ್ನು ಆತನ ಬಂಧನದಿಂದ ಮುಕ್ತಗೊಳಿಸಿ ಅದಕ್ಕೊಂದು ಪುಸ್ತಕದ ಆಕಾರಕೊಟ್ಟೆ...' ಎಂದು ಹೇಳಿಕೆ ನೀಡುತ್ತಾನೆ. ಈ ಹಂತದಲ್ಲೇ ಆರೋಪಿಪರ ವಕೀಲರು ಎದ್ದುನಿಂತು ಪುಸ್ತಕವನ್ನು 'ಬಿಡುಗಡೆ' ಮಾಡಿದ ವೀಡಿಯೋ, ಪತ್ರಿಕಾ ವರದಿ ಹಾಗೂ ಬಿಡುಗಡೆ ಮಾಡಿದ ನಿವೃತ್ತ ನ್ಯಾಯಮೂರ್ತಿಗಳ ಫೋಟೊ ಹಾಜರುಪಡಿಸುತ್ತಾರೆ. ಅಲ್ಲಿಗೆ ವಿಚಾರಣೆ, ವಾದ-ಪ್ರತಿವಾದ ಮುಗಿದು ತೀರ್ಪನ್ನು ಅನಿರ್ದಿಷ್ಟ ಕಾಲ ಕಾಯ್ದಿರಿಸಲಾಗುತ್ತದೆ.

